# ಟ್ಯಾಟೂ

## ದೇಹದ ಮೇಲೆ ಚಿತ್ತಾಪಹಾರಿ ಚಿತ್ತಾರ

**ಟ್ಯಾಟೂ ಹಾಕಿಸಿಕೊಳ್ಳುವುದು ಒಂದು ಕಲೆ. ಕೆಲವರಿಗೆ ಇದೊಂದು ಹುಚ್ಚು. ಕೈಗಳು, ಕಾಲು, ಮುಖ, ಕತ್ತು, ಬೆನ್ನು... ಹೀಗೆ ದೇಹದ ಮೇಲೆ ಹಾಕಿಸಿಕೊಳ್ಳುವ ಹಚ್ಚೆ ಸೃಜನಶೀಲತೆಯ ಅಭಿವ್ಯಕ್ತಿಯೂ ಹೌದು. ಅನಾದಿ ಕಾಲದಿಂದಲೂ ಚಾಲ್ತಿಯಲ್ಲಿರುವ ಈ ಟ್ಯಾಟೂ ಫ್ಯಾಷನಬಲ್ ರೂಪ ಪಡೆದಿದೆ. ಈ ನಡುವೆ ಟ್ಯಾಟೂ ಹಾಕಿಸಿಕೊಳ್ಳುವುದು ಅನಾರೋಗ್ಯಕ್ಕೆ ಕಾರಣವಾಗುತ್ತಿದೆ ಎಂಬ ಗುಲ್ಲೂ ಎದ್ದಿದೆ.**

**ಆಶಾ ಎಸ್. ಕುಲಕರ್ಣಿ**



ಭಾರತದಲ್ಲಿ ಟ್ಯಾಟೂ ಅಥವಾ ಹಚ್ಚೆಗಳಿಗೆ ಸುದೀರ್ಘ ಇತಿಹಾಸವಿದೆ. ಇಂದಿನ ಆಧುನಿಕ ತಂತ್ರಜ್ಞಾನಕ್ಕೂ ಮುನ್ನ ಟ್ಯಾಟೂಗಳನ್ನು ಸಾಂಪ್ರದಾಯಿಕ ವಿಧಾನದ ಮೂಲಕ ಹಾಕಲಾಗುತ್ತಿತ್ತು. ನಾವು ಎಲ್ಲಾದರೂ ಹೊರಗಡೆ ಹೋದ ಸಮಯದಲ್ಲಿ ಹಳ್ಳಿಗಳಲ್ಲಿ, ಜಾತ್ರೆಗಳಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ರಸ್ತೆ ಬದಿಯಲ್ಲಿ ಕುಳಿತು ಹಚ್ಚೆ ಹಾಕುವವರನ್ನು ನೋಡಿರುತ್ತೇವೆ. ಹಚ್ಚೆ ಹಾಕುವವರು ಜಾನಪದ ಹಾಡುಗಳನ್ನು ಹೇಳಿಕೊಂಡು ಹಚ್ಚೆ ಹಾಕಿಸಿಕೊಳ್ಳುವವರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಪಡುತ್ತಾ ಹಚ್ಚೆ ಹಾಕುವ ಸೂಜಿಗಳನ್ನು ಚುಚ್ಚುತ್ತಿರುತ್ತಾರೆ. ಹಚ್ಚೆ ಹಾಕಿಸಿಕೊಳ್ಳುವವರಿಗೆ ತುಂಬಾ ನೋವಿದ್ದರೂ, ಅದರಲ್ಲಿಯೇ ಖುಷಿ ಪಡುತ್ತಿರುತ್ತಾರೆ. ಮನೆಗೆ ಬಂದ ನಂತರವೂ ಎರಡು ಮೂರು ದಿನಗಳ ಕಾಲ ನೋವು ಇದ್ದೇ ಇರುತ್ತದೆ. ಈ ಫಜೀತಿ ನಮಗೆ ಬೇಡವೇ ಬೇಡ ಎಂದು ಸುಮಾರು ಜನರು ಹಚ್ಚೆ ಹಾಕಿಸಿಕೊಳ್ಳುವ ಸಾಹಸಕ್ಕೆ ಮುಂದಾಗುವುದಿಲ್ಲ. ಆದರೆ ಇಂದಿನ ಯಂಗ್ ಜನರೇಶನ್‌ಗೆ ಈ ಹಚ್ಚೆ ಅಥವಾ ಟ್ಯಾಟೂ ಹುಚ್ಚಾಗಿ ಪರಿಣಮಿಸಿದೆ.

ಈಗಿನ ಯುವಕ ಯುವತಿಯರ ದೇಹದಲ್ಲಿ ಒಂದಾದರೂ ಟ್ಯಾಟೂ ಇಲ್ಲದಿದ್ದರೆ ಅವರಿನ್ನು ಮಾರ್ಡನ್ ಆಗಿಲ್ಲ ಎಂದು ಪರಿಗಣಿಸುವ ವಾಡಿಕೆ ಈಗ ನಿರ್ಮಾಣವಾಗಿದೆ. ಹೀಗಾಗಿ ಹೆಚ್ಚಿನ ಜನ ಈ ಟ್ಯಾಟೂಗೆ ಮೊರೆಹೋಗುತ್ತಿದ್ದಾರೆ.

ಹಿಂದಿನ ಕಾಲದಲ್ಲಿ ಧಾರ್ಮಿಕ ಹಚ್ಚೆಗಳಿಗೆ ಬದ್ಧರಾಗಿದ್ದ ಜನ ದೇವರ ಚಿತ್ರಗಳು, ಸೂರ್ಯಚಂದ್ರ, ನಕ್ಷತ್ರಗಳ ಚಿತ್ರಗಳು ಮತ್ತು ದೇವರಿಗೆ ಸಂಬಂಧಪಟ್ಟ ಆಯುಧಗಳ ಚಿತ್ರಗಳನ್ನು ಕೈಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಇದಲ್ಲದೇ ಹೆಣ್ಣು ಮಕ್ಕಳು ತಮ್ಮ ಗಂಡನ ಹೆಸರನ್ನು ಕೈಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು ಮತ್ತು ಅವರ ಹಣೆಯ ಮೇಲೆ ಕುಂಕುಮದ ಜಾಗದಲ್ಲಿ ಹಚ್ಚೆ ಹಾಕಿಸುವುದು ತುಂಬಾ ಸಾಮಾನ್ಯದ ಸಂಗತಿಯಾಗಿತ್ತು. ಆದರೆ ಈಗ ಜಮಾನಾ ಬದಲಾಗಿದೆ. ಈ ಟ್ಯಾಟೂ ಬರೀ ಕೈಗಳ ಮೇಲಷ್ಟೇ ಉಳಿದಿಲ್ಲ. ತೋಳುಗಳನ್ನಾವರಿಸಿಕೊಂಡು ಭುಜಕ್ಕೇರಿದೆ. ಧಾರ್ಮಿಕ ಹಚ್ಚೆಗಳ ಜಾಗದಲ್ಲಿ ಆಧುನಿಕ ಹಚ್ಚೆಗಳು ಬಂದಿವೆ. ಆಗ ರಸ್ತೆ ಬದಿಯಲ್ಲಿ ಕುಳಿತುಕೊಂಡು ತಮ್ಮ ಹಳೆಯ